## ಕೃತ್ಯ ಜರುಗಿದ್ದೇ ಆದಲ್ಲಿ...

- ಸಾಧ್ಯವಾದಷ್ಟು ಜೋರಾಗಿ ಕೂಗಿ ಸಾರ್ವಜನಿಕರ ಗಮನ ಸೆಳೆಯಿರಿ. ಕೃತ್ಯದ ಬಗ್ಗೆ ಆಪ್ತರಿಗೆ ಅಥವಾ ತಮ್ಮನ್ನು ಮೊದಲು ಕಂಡವರಿಗೆ ತಿಳಿಸಿ. ಸಮೀಪದ ಪೊಲೀಸ್ ಠಾಣೆಗೆ ಫೋನ್ ಮಾಡಿ. ಇಲ್ಲವೇ ಠಾಣೆಗೆ ಹೋಗುವ ಪರಿಸ್ಥಿತಿಯಲ್ಲಿದ್ದರೆ ತಡಮಾಡದೆ ದೂರನ್ನು ಸಲ್ಲಿಸಿ. ಬರೆಯುವ ಪರಿಸ್ಥಿತಿಯಲ್ಲಿದಿದ್ದರೆ ಠಾಣಾಧಿಕಾರಿಗೆ ವಿವರವಾಗಿ ಹೇಳಿ ಬರೆಸಿ. ಪ್ರಕರಣ ದಾಖಲಾದ ಬಳಿಕ ಅದರ ನಕಲು ಪಡೆಯಿರಿ. ಈ ಸಂದರ್ಭದಲ್ಲಿ ಮಹಿಳಾ ಪೊಲೀಸರ ಸಹಾಯ ಒದಗಿಸುವುದು ಕಾನೂನಿನ ಅನ್ವಯ ಕಡ್ಡಾಯವಾಗಿರುತ್ತದೆ.
- ಠಾಣೆಗೆ ಹೋಗಲಿಕ್ಕಾಗದಿದ್ದಲ್ಲಿ ಆಸ್ಪತ್ರೆಗೆ ಹೋಗಿ ವೈದ್ಯರ ಮುಂದೆ ಘಟನೆಯ ಬಗ್ಗೆ ವಿವರವಾಗಿ ಹೇಳಿ ಬರೆಸಿ. ಆಕೆ ಮಾತನಾಡುವ ಸ್ಥಿತಿಯಲ್ಲಿ ಇರದಿದ್ದಲ್ಲಿ ಜೊತೆಯಲ್ಲಿ ಬಂದವರು ಆಕೆಯನ್ನು ತಡಮಾಡದೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು. ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕು. ಆಕೆಯೊಂದಿಗೆ ಆಸ್ಪತ್ರೆಗೆ ಬಂದವರು ಕೃತ್ಯದ ಬಗ್ಗೆ ಬರೆಸಬೇಕು. ವೈದ್ಯಕೀಯ ಪರೀಕ್ಷೆಗೆ ಮುನ್ನ ಯಾವುದೇ ರೀತಿಯಲ್ಲಿ ಸಾಕ್ಷ್ಯ ನಾಶವಾಗದಂತೆ ರಕ್ಷಿಸಬೇಕು.
- ದೌರ್ಜನ್ಯಕ್ಕೊಳಗಾದ ಮಹಿಳೆಯರ ಸಹಾಯಕ್ಕಾಗಿಯೇ ಕೇಂದ್ರ ಸರ್ಕಾರದ ಅನುಧಾನದಲ್ಲಿ 'One Stop Crisis Center' ಅನ್ನು ಉಡುಪಿ, ಚಾಮರಾಜನಗರ, ಧಾರವಾಡ ಹಾಗೂ ಚಿತ್ರದುರ್ಗದಲ್ಲಿ ತೆರೆಯಲಾಗಿದೆ. ಮಿಕ್ಕ ಜಿಲ್ಲೆ/ನಗರಗಳಲ್ಲಿನ ಪ್ರತಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಅನುದಾನದಲ್ಲಿ ವಿಶೇಷ ಮಹಿಳಾ ಚಿಕಿತ್ಸಾ ಘಟಕಗಳಾದ 'ಗೆಳತಿ ಕೇಂದ್ರ'ಗಳನ್ನು ನಿರ್ವಹಿಸಲಾಗುತ್ತಿದೆ.

## ತುರ್ತು ಪರಿಸ್ಥಿತಿ ಸಂಖ್ಯೆಗಳು

- 1/2 (ಎಕ್ಸ್‌ಟೆನ್ಷನ್ 8): ಇದರಲ್ಲಿ ಪೊಲೀಸ್, ಅಗ್ನಿಶಾಮಕ ದಳ ಹಾಗೂ ವೈದ್ಯಕೀಯ ಸೇವೆಗಳಿಗೆ ಮಾಹಿತಿ ರವಾನಿಸಲಾಗುತ್ತದೆ. ನವೆಂಬರ್ 1, 2019ರಿಂದ ಈ ವ್ಯವಸ್ಥೆ ಚಾಲೂ ಆಗಿದೆ. 'One India, One Emergency Number' ಎಂಬ ಧ್ಯೇಯ ವಾಕ್ಯದೊಂದಿಗೆ 14 ರಾಜ್ಯಗಳಲ್ಲಿ ಏಕಕಾಲಕ್ಕೆ ಈ ವ್ಯವಸ್ಥೆ ಜಾರಿ ಮಾಡಲಾಗಿದೆ. ಸಹಾಯಕ್ಕೆ ಧಾವಿಸುವ ಸ್ವಯಂಸೇವಕರಾಗಲು ಇಚ್ಛೆ ಉಳ್ಳವರೂ ಇಲ್ಲಿ ತಮ್ಮ ವಿವರ ನೋಂದಾಯಿಸಿ ಆಪತ್ತಿನ ಪರಿಸ್ಥಿತಿಗಳಲ್ಲಿ ಕರೆ ಬಂದಾಗ ಸಹಾಯಕ್ಕೆ ಧಾವಿಸಬಹುದಾಗಿದೆ.
- ಪೊಲೀಸ್ ನಿಯಂತ್ರಣ ಕೊಠಡಿ ಸಂಖ್ಯೆ **100**
- ಡಿಜಿ ಕಂಟ್ರೋಲ್ ಟೋಲ್ ಫ್ರೀ ಸಂ. **1800 4250100** (ಇದರಲ್ಲಿ ಮಾಹಿತಿಯನ್ನು ಮೌಖಿಕವಾಗಿ ಪಡೆದು ಸ್ಥಳೀಯ ಪೊಲೀಸರಿಗೆ ಸೂಕ್ತ ಕ್ರಮಕ್ಕೆ ಕಳುಹಿಸಲಾಗುತ್ತದೆ)
- ಬೆಂಗಳೂರು ನಗರ ಪೊಲೀಸರ (ವನಿತಾ) ಸಹಾಯವಾಣಿ **080–2294 3225** (ಬೆಳಿಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ)
- ಮಹಿಳಾ ಸಹಾಯವಾಣಿ: **181** (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ)
- ಮಹಿಳಾ ಸಹಾಯವಾಣಿ **(Helpline): 1091**
- ಮಕ್ಕಳ ಸಹಾಯವಾಣಿ **(Helpline): 1098**



## ತುರ್ತು ಸಂದರ್ಭ: Panic Button ಹೊಂದಿರುವ ಆ್ಯಪ್‌ಗಳು

- 112 India APP
- KSP APP (SOS ಕೆಂಪು ಬಟನ್)
- ಬೆಂಗಳೂರು ನಗರವಾದರೆ Suraksha App
- ಯಾವ ಸಂದರ್ಭಗಳಲ್ಲಿ 112 ಸೇವೆ ಪಡೆದುಕೊಳ್ಳಬಹುದು:
- ಅಪಾಯದ ಸಂದರ್ಭಗಳಲ್ಲಿ
- ಚುಡಾಯಿಸುವುದು, ಮಕ್ಕಳ ಮೇಲಿನ ದೌರ್ಜನ್ಯ... ಇತ್ಯಾದಿಗಳಿಗೆ
- ಯಾವುದಾದರೂ ಅಪರಾಧ ಜರುಗುವುದನ್ನು ನೋಡಿದ್ದರೆ
- ಪ್ರಕೃತಿ ವಿಕೋಪ ಅಥವಾ ಅಪಘಾತದ ಸಂದರ್ಭದಲ್ಲಿ
- ಯಾರಿಂದಲಾದರೂ ಬೆದರಿಕೆ ಉಂಟಾಗಿದ್ದರೆ
- ಯಾವುದಾದರೂ ನಿರ್ಜನ ಪ್ರದೇಶ/ಹೆದ್ದಾರಿಗಳಲ್ಲಿ ಅನಾರೋಗ್ಯದಿಂದಾಗಿ ಅಥವಾ ಅಸಹಾಯಕರಾಗಿದ್ದಾಗ ಸಹಾಯ ಬೇಕಾದಲ್ಲಿ
- ಆಪ್ತ ಸಮಾಲೋಚನೆಯ ಅವಶ್ಯಕತೆ ಇದ್ದರೆ
- ಸಾರ್ವಜನಿಕರ ಸುರಕ್ಷತೆಗೆ ಧಕ್ಕೆ ಉಂಟಾಗುವ ಸಂಶಯಾಸ್ಪದ ಸಂದರ್ಭಗಳಲ್ಲಿ

## ಅಪಾಯ ಎದುರಾದಾಗ...

- ಸ್ವ ರಕ್ಷಣಾ ವಿಧಾನಗಳನ್ನು ಬಲ್ಲಿರಾದರೆ ಅದನ್ನು ಉಪಯೋಗಿಸಿ.
- ಮಾರುಕಟ್ಟೆಯಲ್ಲಿ (ಆನ್‌ಲೈನ್‌ನಲ್ಲಿ ಸಹ) ಸುಲಭವಾಗಿ ಲಭ್ಯವಿರುವ ಪೆಪ್ಪರ್ ಸ್ಪ್ರೇಗಳು, ಮೆಣಸಿನ ಪುಡಿ, ಆತ್ಮರಕ್ಷಣಾ ಆಯುಧಗಳನ್ನು ಬಳಸಿ.
- ಅಪಾಯಕಾರಿ ಪ್ರದೇಶದಿಂದ ಸಾಧ್ಯವಾದಷ್ಟು ಬೇಗ ಹೊರಟುಬಂದು ಸಮೀಪದ ಪೊಲೀಸ್ ಠಾಣೆಗೆ ಧಾವಿಸಿ, ಕೃತ್ಯ ವಿವರಿಸಿ ಪ್ರಕರಣ ದಾಖಲಿಸಿ. ಮಹಿಳಾ ಪೊಲೀಸರ ಸಹಾಯ ಪಡೆಯಿರಿ.
- KSP APPನಲ್ಲಿ ತಾವಿರುವ ಜಾಗದ ಫೋಟೊ, ವಿಡಿಯೊ ಅಪ್‌ಲೋಡ್ ಮಾಡುವ ವ್ಯವಸ್ಥೆ ಇದೆ. ಆನ್‌ಲೈನ್‌ನಲ್ಲೇ ಪ್ರಕರಣ ದಾಖಲಿಸಬಹುದು.

